**O.S. No. 89/2015**
**ಪಿ.ಡಬ್ಲ್ಯು-01**

**<u>ಸಾಕ್ಷಿಯನ್ನು ದಿನಾಂಕಃ 18.11.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಮಾನ್ಯ ಸರ್ಕಾರಿ ವಕೀಲರಿಂದಃ</u>**

ಪ್ರತಿವಾದಿಗಳು ಕಂದಕ ತೆಗೆಯಲು ಪ್ರಯತ್ನಿಸಿದ್ದರಿಂದ ಈ ದಾವೆ ಸಲ್ಲಿಸಿರುತ್ತೇನೆ. ಹೆಚ್.ಡಿ. ಕೋಟೆಯಲ್ಲಿರುವ ಅರಣ್ಯ ಪ್ರದೇಶದ ಸುತ್ತ-ಮುತ್ತ ಆನೆ ಹಾವಳಿ ಸಾಮಾನ್ಯವಾಗಿ ಇದೆ ಎಂದರೆ ಸರಿ. ಸಾಮಾನ್ಯವಾಗಿ ರೈತರು ಬೆಳೆದ ಬೆಳೆಗಳನ್ನು ಹಾಳು ಮಾಡದಂತೆ ಹಾಗು ಮನುಷ್ಯ ಹಾಗು ಪ್ರಾಣಿಗಳ ಸಂಘರ್ಷವನ್ನು ತಪ್ಪಿಸಲು ಅರಣ್ಯ ಅಧಿಕಾರಿಗಳು ಅರಣ್ಯ ಪ್ರದೇಶದ ಸುತ್ತ-ಮುತ್ತ ಕಂದಕ ತೆಗೆಯುತ್ತಾರೆ ಎಂದರೆ ಸರಿ. ದಾವಾ ಸ್ವತ್ತನ್ನು 2003-2004 ರಲ್ಲಿ ಖರೀದಿಸಿರುತ್ತೇನೆ. ನಾನು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ಆನೆ ಕಂದಕವನ್ನು ಎಲ್ಲಿ ತೆಗೆದಿದ್ದರು ಎಂದು ನನಗೆ ಗೊತ್ತು. ಅದನ್ನು ನಮ್ಮ ಜಮೀನಿಂದ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ತೆಗೆದಿದ್ದರು. ನಾನು ದಾವಾ ಸ್ವತ್ತನ್ನು ಖರೀದಿಸುವ ಮುಂಚೆ ಸದರಿ ಆಸ್ತಿಯನ್ನು 2003-2004 ರಲ್ಲಿ ನೋಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ವಕೀಲರು ಮುಂದಿನ ಪಾಟೀ ಸವಾಲಿವಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**